

# ಕೆನರಾ ಪ್ಲಾಸ್ಟ್ ಗೆ ವಿ ಡಿ ಐ ಟಿ ವಿದ್ಯಾರ್ಥಿಗಳು ಭೇಟಿ

ಸಾಗರ ಸಾಮ್ರಾಟ ಸಮಾಚಾರ

**ಹಳಿಯಾಳ:** ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ಮೂರನೇ ವರ್ಷದ ವಿದ್ಯಾರ್ಥಿಗಳು ಇತ್ತೀಚೆಗೆ ಪ್ಲಾಸ್ಟಿಕ್ ಬಾಟಲಿ ತಯಾರಿಕಾ ಕಾರ್ಖಾನೆ " ಕೆನರಾ ಪ್ಲಾಸ್ಟ" ಗೆ ಭೇಟಿ ನೀಡಿದ್ದರು.

ಕಾರ್ಖಾನೆಯ ಮಾಲಿಕರಾದ ಕೃಷ್ಣಮೂರ್ತಿ ರಾವ್ ಇಂಜೆಕ್ಷನ್ ಮೌಲ್ಡಿಂಗ್ ಮತ್ತು ಬ್ಲೋ ಮೌಲ್ಡಿಂಗ್ ತಂತ್ರಜ್ಞಾನ ಬಳಸಿ ಪ್ಲಾಸ್ಟಿಕ್ ಬಾಟಲಿ ಮತ್ತು ಮುಚ್ಚಳವನ್ನು ತಯಾರಿಸುವ ವಿಧಾನವನ್ನು ವಿವರಿಸಿದರು. ಬಾಟಲಿ ತಯಾರಿಕೆಗೆ ಬೇಕಾಗುವ ಕಚ್ಚಾ ವಸ್ತುಗಳು ಹಾಗೂ ತಯಾರಿಕಾ ಹಂತದಲ್ಲಿ ಬಳಸಲಾಗುತ್ತಿರುವ ಉಪಕರಣಗಳ ಕುರಿತು ವಿವರಿಸಿದರು. ಪ್ಲಾಸ್ಟಿಕ್ ಬಾಟಲಿ ಮತ್ತು ಮುಚ್ಚಳವನ್ನು ತಯಾರಿಸಲು ತಗಲುವ ವೆಚ್ಚ ಹಾಗೂ ಮಾರಾಟದ ವಿವರಣೆ ನೀಡಿದರು. ಡಾ. ಶಂಕರ್ ಬಡಿಗೇರ್ ಮತ್ತು ಪ್ರೊ. ಗುರುನಾಥ ಮೇವುಂಡಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮುರುಗಯ್ಯ ಎಸ್ ಬಿ ಆಯೋಜಿಸಿದ್ದರು.ಹಳಿಯಾಳದ ಕೈಗಾರಿಕಾ ವಲಯದಲ್ಲಿ ಸ್ಥಾಪಿತವಾಗಿರುವ ಕೆನರಾ ಪ್ಲಾಸ್ಟ್ ಗೆ 60ಕ್ಕೂ ಅಧಿಕ ವಿದ್ಯಾರ್ಥಿಗಳು ಭೇಟಿ ನೀಡಿದ್ದರು. ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನದ ಅಭಿವೃದ್ಧಿಗೆ ಈ ಕಾರ್ಯಕ್ರಮವು ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆನರಾ ಪ್ಲಾಸ್ಟ್ ಗೆ ವಿಡಿಐಟಿ ವಿದ್ಯಾರ್ಥಿಗಳು ಭೇಟಿ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ಮೂರನೇ ವರ್ಷದ ವಿದ್ಯಾರ್ಥಿಗಳು ಇತ್ತೀಚೆಗೆ ಪ್ಲಾಸ್ಟಿಕ್ ಬಾಟಲಿ ತಯಾರಿಕಾ ಕಾರ್ಖಾನೆ ಕೆನರಾ ಪ್ಲಾಸ್ಟ ಗೆ ಭೇಟಿ ನೀಡಿದರು.

ಕಾರ್ಖಾನೆಯ ಮಾಲಿಕರಾದ ಕೃಷ್ಣಮೂರ್ತಿ ರಾವ್ ಇಂಜೆಕ್ಷನ್ ಮೌಲ್ಡಿಂಗ್ ಮತ್ತು ಬ್ಲೋ ಮೌಲ್ಡಿಂಗ್ ತಂತ್ರಜ್ಞಾನ ಬಳಸಿ ಪ್ಲಾಸ್ಟಿಕ್ ಬಾಟಲಿ ಮತ್ತು ಮುಚ್ಚಳವನ್ನು ತಯಾರಿಸುವ ವಿಧಾನವನ್ನು ವಿವರಿಸಿದರು. ಬಾಟಲಿ ತಯಾರಿಕೆಗೆ ಬೇಕಾಗುವ ಕಚ್ಚಾ ವಸ್ತುಗಳು ಹಾಗೂ ತಯಾರಿಕಾ ಹಂತದಲ್ಲಿ ಬಳಸಲಾಗುತ್ತಿರುವ ಉಪಕರಣಗಳ ಕುರಿತು ವಿವರಿಸಿದರು. ಪ್ಲಾಸ್ಟಿಕ್ ಬಾಟಲಿ ಮತ್ತು ಮುಚ್ಚಳವನ್ನು ತಯಾರಿಸಲು ತಗಲುವ ವೆಚ್ಚ ಹಾಗೂ ಮಾರಾಟದ ವಿವರಣೆ ನೀಡಿದರು. ಡಾ. ಶಂಕರ್ ಬಡಿಗೇರ್ ಮತ್ತು ಪ್ರೊ. ಗುರುನಾಥ ಮೇವುಂಡಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮುರುಗಯ್ಯ ಎಸ್ ಬಿ ಆಯೋಜಿಸಿದ್ದರು. ಹಳಿಯಾಳದ ಕೈಗಾರಿಕಾ ವಲಯದಲ್ಲಿ ಸ್ಥಾಪಿತವಾಗಿರುವ ಕೆನರಾ ಪ್ಲಾಸ್ಟ್ ಗೆ 60ಕ್ಕೂ ಅಧಿಕ ವಿದ್ಯಾರ್ಥಿಗಳು ಭೇಟಿ ನೀಡಿದ್ದರು. ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನದ ಅಭಿವೃದ್ಧಿಗೆ ಈ ಕಾರ್ಯಕ್ರಮವು ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.